3. ಪ್ರಶ್ನೋತ್ತರಗಳು

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಭೂಮಾಪಕರ ಹುದ್ದೆಗಳು

226(1599); ಶ್ರೀ ಶ್ರೀನಿವಾಸ ಜಿ.ಎಚ್. (ತರೀಕೆರೆ)

ಅ) ತರೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಲವು ನಾಡಕಚೇರಿಯಲ್ಲಿ ಉಪ ತಹಶೀಲ್ದಾರರಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಲಿ ಇರುವ ಭೂ ಮಾಪಕರ ನೇಮಕಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ತರೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 5 ನಾಡಕಚೇರಿಯಲ್ಲಿ 4 ಉಪ ತಹಶೀಲ್ದಾರರ ಹುದ್ದೆಗಳು ಭರ್ತಿಯಾಗಿರುತ್ತದೆ. 1 ಉಪ ತಹಶೀಲ್ದಾರ್ ಹುದ್ದೆ ಖಾಲಿ ಇದ್ದು ಉಪತಹಶೀಲ್ದಾರರ ಹುದ್ದೆಗಳನ್ನು ಪ್ರಾದೇಶಿಕ ಆಯುಕ್ತರಿಂದ ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ಆ) ಹೊಸದಾಗಿ ನೇಮಕಗೊಂಡು ತರಬೇತಿಯಲ್ಲಿರುವ 1613 ಭೂಮಾಪಕ ಶಿಕ್ಷಣಾರ್ಥಿಗಳ ತರಬೇತಿಯು ಜುಲೈ 2014 ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ತರಬೇತಿ ಪೂರ್ಣಗೊಂಡ ತಕ್ಷಣ ಅಂದರೆ ಅಗಸ್ಟ್ 2014 ರ ಮಾಹೆಯ ಪ್ರಾರಂಭದಲ್ಲೇ ಅವಶ್ಯಕತೆಗನುಗುಣವಾಗಿ ಎಲ್ಲಾ ಕಚೇರಿಗಳಿಗೂ ಹೆಚ್ಚುವರಿಯಾಗಿ ಭೂಮಾಪಕರ ಹುದ್ದೆಗಳನ್ನು ಹಂಚಿಕೆ ಮಾಡಿ ಭರ್ತಿ ಮಾಡಲಾಗುವುದು.

ಇ) ತರೀಕೆರೆ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭೂಮಾಪಕರ ವಿವರ ಈ ಕೆಳಗಿನಂತಿದೆ.

ಮಂಜೂರು	ಭರ್ತಿ	ಖಾಲಿ
9	7	2

ಶ್ರೀ ಜಿ.ಎಚ್. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ತರೀಕೆರೆಯಲ್ಲಿ ಇದುವರೆಗೂ ಕೂಡ ಒಬ್ಬ ಡೆಪ್ಯುಟಿ ತಹಶೀಲ್ದಾರ್‌ನ್ನು ಕೊಟ್ಟಿಲ್ಲ. ಎರಡು ಜನ ಕಡಿಮೆ ಇದ್ದಾರೆ. ಅವರನ್ನು ಕೊಟ್ಟರೆ ಕೆಲಸ ಮಾಡಬಹುದು. ಅದರ ಜೊತೆಗೆ surveyors ಕೂಡ ಬಹಳ ಕಡಿಮೆ ಇದ್ದಾರೆ. ಅದರಿಂದ survey departmentನಲ್ಲಿ ಯಾವುದೇ ಕಾಮಗಾರಿ ಕೆಲಸಗಳು ಆಗುತ್ತಿಲ್ಲ. ತುಂಬಾ ಜನ ಕಡಿಮೆ ಇದ್ದಾರೆ. ಇಬ್ಬರು ಕಡಿಮೆಯಿದ್ದು, ಇತ್ತೀಚೆಗೆ ಏಳು ಜನರನ್ನು ಹಾಕಿರುವುದು. ಅದಕ್ಕಿಂತ ಮೊದಲು ಇಬ್ಬರೇ ಇದ್ದದ್ದು, ದಯವಿಟ್ಟು ಅದನ್ನು ತುಂಬಿಸುವುದಕ್ಕೆ ಸಂಬಂಧಪಟ್ಟವರಿಗೆ ಹೇಳಬೇಕೆಂದು ಹೇಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ತರೀಕೆರೆ ಕ್ಷೇತ್ರದಲ್ಲಿ ಐದು ಹೋಬಳಿಗಳಿದ್ದು, ನಾಲ್ಕು ಹೋಬಳಿಗಳಲ್ಲಿ ಡೆಪ್ಯುಟಿ ತಹಶೀಲ್ದಾರ್ ಇದ್ದಾರೆ. ಒಂದೇ ಒಂದು ಶಿವನ ಹೋಬಳಿ ಎನ್ನುವ ನಾಡ ಕಚೇರಿಯಲ್ಲಿ ಉಪ ತಹಶೀಲ್ದಾರ್ ಹುದ್ದೆ ಖಾಲಿ ಇದೆ. ಈಗಾಗಲೇ additional charge ಕೊಟ್ಟು revenue inspector ಕೈಲಿ ಮಾಡಿಸುತ್ತಿದ್ದೇವೆ. Regional commissioner direction ಕೊಟ್ಟಿದ್ದಾರೆ.

ಅಧ್ಯಕ್ಷರು:– ಡೈರೆಕ್ಷನ್ ಅಲ್ಲ, ಬೇಗ ಹಾಕಿರಿ ಎಂದು ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಹಾಕಬೇಕು ಎಂದು ಹೇಳಿದ್ದೇನೆ. ಇನ್ನು ಎರಡನೆ ಪ್ರಶ್ನೆ ಅವರು ಭೂಮಾಪಕರ ಬಗ್ಗೆ ಕೇಳಿದರು. ತರೀಕೆರೆಯಲ್ಲಿ ಮಂಜೂರಾಗಿರುವುದು 9, ಭರ್ತಿಯಾಗಿರುವುದು 7, ಖಾಲಿಯಿರುವುದು 2

ಇದೆ. ಈಗ ಎಲ್ಲಾ job training ನಲ್ಲಿದ್ದಾರೆ. ಅದು ಆದತಕ್ಷಣ ಎಲ್ಲಾ ಜಿಲ್ಲೆಗಳಿಗೂ ಕೂಡ ಕೊಡುತ್ತೇವೆ.

ಜಿಲ್ಲಾ ಕಛೇರಿ ನಿರ್ಮಾಣ

222(2135); ಶ್ರೀ ಲೋಬೋ ಜೆ.ಆರ್.(ಮಂಗಳೂರು ನಗರ ದಕ್ಷಿಣ)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ:

ಆ) ಹಾಗಿದ್ದಲ್ಲಿ, ನಿರ್ಮಾಣಕ್ಕೆ ಅನುದಾನವನ್ನು ಮೀಸಲಾಗಿಡಲಾಗಿದೆಯೇ; ನಿರ್ಮಾಣಕ್ಕಾಗಿ ಜಮೀನನ್ನು ಗುರುತಿಸಲಾಗಿದೆಯೇ; ಎಲ್ಲಿ ಮತ್ತು ಎಷ್ಟು ಜಮೀನುಗಳನ್ನು ಗುರುತಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್: (ಮಾನ್ಯ ಕಂದಾಯ ಸಚಿವರು)

ಅ) ಹೌದು.

ದಕ್ಷಿಣ ಕನ್ನಡ ಜಿಲ್ಲೆಯ ಬಂಗ್ರಕೂಳೂರು ಗ್ರಾಮದ ಸರ್ವೆ ನಂ.38–1ಎ ರಲ್ಲಿ 4–50 ಎಕರೆ ಜಮೀನಿನಲ್ಲಿ ಜಿಲ್ಲಾ ಸಂಕೀರ್ಣ ಕಟ್ಟಡ ನಿರ್ಮಾಣ ಮಾಡಲು ` 23.00 ಕೋಟಿಯ ಅಂದಾಜು ಪಟ್ಟಿಯನ್ನು ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕಂದಾಯ ಇಲಾಖೆಯಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡ ಕಾಮಗಾರಿಗಳ ನಿರ್ಮಾಣವು ಮುಂದುವರೆದ ಯೋಜನೆಯಾಗಿರುತ್ತದೆ. ಈ ಉದ್ದೇಶಕ್ಕೆ ಪ್ರತಿ ಸಾಲಿನಲ್ಲಿ ಅನುದಾನ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲಿ ` 30.00 ಕೋಟಿಗಳ ಅನುದಾನ ಒದಗಿಸಲಾಗಿರುತ್ತದೆ.

ಈ ಹಿಂದೆ ಗುರುತಿಸಲಾದ ಬಂಗ್ರಕೂಳೂರು ಗ್ರಾಮದ ಸರ್ವೆ ನಂ.38/ಎ ರ 4.50 ಎಕರೆ ಜಮೀನು ಮುಳುಗಡೆ ಪ್ರದೇಶಕ್ಕೆ